**ಸಾಕ್ಷಿಯನ್ನು ದಿಃ _24/01/2025_ ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ಅರ್ಜಿದಾರರ ಪರ ವಕೀಲರಿಂದ.**

ನಾನು ಮುಖ್ಯ ವಿಚಾರಣೆಯಾಗಿ ನನ್ನ ಪ್ರಮಾಣಪತ್ರವನ್ನು ಸಲ್ಲಿಸಿದ್ದೇನೆ. ಅದರಲ್ಲಿನ ಸಂಗತಿಗಳು ಸತ್ಯವಾಗಿವೆ. ಸಾಕ್ಷಿದಾರರು ನಿ.ಪಿ.14 ರಲ್ಲಿರುವ ವಿಷಯ ಸಂಗತಿಗಳು ಸತ್ಯವಿರುತ್ತವೆ ಎಂದು ನೋಡಿ ಹೇಳಿರುತ್ತಾರೆ.

***ಪಾಟೀ ಸವಾಲು ಃ 2 ನೇ ಎದುರುದಾರರ ಪರವಾಗಿ.***

ನಾನು ಕೆಐಎಡಿಬಿಯ ಇಂಜಿನಿಯರ ಎಂದು ತೋರಿಸಲು ಗುರುತಿನ ಚೀಟಿ ಅಥವಾ ಯಾವುದೇ ದಾಖಲೆ ಹಾಜರುಪಡಿಸಿಲ್ಲ. ನಾನು ಸದರಿ ಇಲಾಖೆಯಿಂದ ನ್ಯಾಯಾಲಯಕ್ಕೆ ಬಂದು ಸಾಕ್ಷ ನುಡಿಯಲು ಅಧಿಕಾರ ಪತ್ರ ಪಡೆದಿರುವುದಿಲ್ಲ. ಆದ್ದರಿಂದ ನಾನು ಸದರಿ ಇಲಾಖೆಯ ನೌಕರನಲ್ಲ ಎಂದು ಸೂಚಿಸುವ ನಿಮ್ಮ ಸಲಹೆ ಸರಿಯಲ್ಲ. ಸದರಿ ಇಲಾಖೆಯ ಪರವಾನಿಗೆ ಇಲ್ಲದೆ ಅವರ ಪರವಾಗಿ ಅಧಿಕಾರ ಇಲ್ಲದೇ ಖೊಟ್ಟಿ ದಾಖಲಾತಿಗಳನ್ನು ಹಾಜರುಪಡಿಸಿ ಅದರಂತೆ ಸುಳ್ಳು ಸಾಕ್ಷ್ಮವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಪ್ರಮಾಣಪತ್ರದ 3 ನೇ ಖಂಡಿಕೆಯಲ್ಲಿ ಹೇಳಿರುವ ಹಾಗೇ ಮೃತನು ನಿವೃತ್ತಿ ಹೊಂದಿದ ನಂತರ ಸಹ ಗುತ್ತಿಗೆ ಆಧಾರದ ಮೇರೆಗೆ ಜೂನಿಯರ ಇಂಜಿನಿಯರ ಎಂದು ಕೆಲಸ ಮಾಡುತ್ತಿರುವ ವಿಷಯ ಸಂಗತಿ ಸುಳ್ಳು ಇದೆ ಎಂದರೆ ಸರಿಯಲ್ಲ. ಕೆಐಎಡಿಬಿಯಲ್ಲಿ ಮೃತನು ಗುತ್ತಿಗೆ ಆಧಾರದ ಮೇಲೆ ನೇಮಿಸಿ ಮಾಡಿದ ಕರಾರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಆದ್ದರಿಂದ ಮೃತನು ಗುತ್ತಿಗೆ ಆಧಾರದ ಮೇಲೆ ಯಾವತ್ತು ಕೆಲಸ ಮಾಡಿಲ್ಲ, ಆದರೂ ಸಹ ನಿವೃತಿ ಹೊಂದಿದ ನಂತರ ಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸಿದ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಗುತ್ತಿಗೆ ಆಧಾರದ ಮೇಲೆ ಮಾಡಿದ ಕೆಲಸಕ್ಕೆ 25 ಸಾವಿರ ರೂಪಾಯಿ ಸಂಬಳ ನೀಡುತ್ತಿರುವ ಕುರಿತು ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತನಿಗೆ ಸಂಬಳ ಖಾತೆಯ ಮುಖಾಂತರ ಜಮೆ ಆಗುತ್ತಿತ್ತು. ಈ ಕುರಿತು ದಾಖಲೆ ಹಾಜರುಪಡಿಸಿಲ್ಲ ಎಂದರೆ ನಿಜ. ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುವ ವ್ಯಕ್ತಿಗೆ ಸಂಬಳ ಏಜೆನ್ಸಿ ಅಂದರೆ ಔಟಸೋರ್ಸ ಮುಖಾಂತರ ನೀಡಲಾಗುತ್ತದೆ. ಈ ರೀತಿ ಇರುವಾಗ ಮೃತನು ಯಾವತ್ತು ಸಹ ಸದರಿ ಇಲಾಖೆಯಲ್ಲಿ ಕೆಲಸ ಮಾಡಿಲ್ಲ ಎಂದರೆ ಸರಿಯಲ್ಲ. ಮೃತನಿಗೆ 25 ಸಾವಿರ ರೂಪಾಯಿ ಸಂಬಳ ನೀಡುತ್ತಿದ್ದ ಬಗ್ಗೆ ಯಾವುದೇ ರೀತಿಯ ದಾಖಲ

ಹಾಜರುಪಡಿಸಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿದಾರರು ಇಲ್ಲ ಎಂದರೆ ಮಾಡುತ್ತೇನೆ ಎಂದು ಉತ್ತರಿಸುತ್ತಾರೆ. ಈ ರೀತಿ ಇರುವಾಗ 25 ಸಾವಿರ ರೂಪಾಯಿ ಸಂಬಳ ಆಧಾರ ರಹಿತ ಸುಳ್ಳು ಹೇಳಿಕೆ ಎಂದರೆ ಸರಿಯಲ್ಲ.

ನಿ.ಪಿ.14 ರಂತೆ ಇರುವ ದಾಖಲೆಗೂ ಮತ್ತು ಮೃತನಿಗೆ ಯಾವುದೇ ಸಂಬಂಧವಿಲ್ಲ, ಸದರಿ ದಾಖಲೆ ಸೆಕ್ಯೂರಿಟಿ ಏಜೆನ್ಸಿಯದು ಇರುತ್ತದೆ ಎಂದರೆ ನಿಜ. ಸದರಿ ದಾಖಲೆಯಲ್ಲಿ ನನ್ನ ಸಹಿ ಇರುವುದಿಲ್ಲ ಎಂದರೆ ನಿಜ.

ಮೃತನೊಂದಿಗೆ ನಾವು ದಿಃ11-07-2020 ರಿಂದ 10-07-2021 ರ ಅವಧಿಗೆ ಮಾತ್ರ ಗುತ್ತಿಗೆ ಅವಧಿಯಿತ್ತು ಎಂದರೆ ಸಾಕ್ಷಿದಾರರು 2018 ನೇ ಇಸ್ವಿಯಿಂದ ಮೃತನು ವರ್ಷ ವರ್ಷ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತ ಬಂದಿರುತ್ತಾರೆ ಎಂದು ಉತ್ತರಿಸುತ್ತಾರೆ. ಈ ರೀತಿ ಗುತ್ತಿಗೆ ಆಧಾರದ ಕೆಲಸ ಒಂದು ವರ್ಷಕ್ಕೆ ಮಾತ್ರ ಸೀಮಿತವಾಗಿದ್ದು, ಸದರಿ ಅವಧಿ ಮುಗಿದ ನಂತರ ಅದನ್ನು ಪುನಃ ರಿನಿವಲ್ ಮಾಡಬೇಕಾಗುತ್ತದೆ, ಇಲ್ಲದಿದ್ದರೆ ಸದರಿ ಅವಧಿ ಮುಂದುವರೆಯುವುದಿಲ್ಲ ಎಂದರೆ ನಿಜ. ಸದರಿ ಅವಧಿಗೆ ಮೃತನು 7 ತಿಂಗಳು ಮಾತ್ರ ಕೆಲಸ ಮಾಡಿದ್ದು, 5 ತಿಂಗಳು ಮುಗಿಯುವ ಅವಧಿಗೆ ಅವರು ತೀರಿಹೋಗಿದ್ದರು ಎಂದರೆ ನಿಜ.

ನಿ.ಪಿ.14 ರ 7 ನೇ ಪುಟದಲ್ಲಿ ಮೃತನು ನಿವೃತ್ತಿ ಹೊಂದಿರುವ ಕುರಿತು ಮಾತ್ರ ಉಲ್ಲೇಖವಿದ್ದು, ಸದರಿ ದಾಖಲೆ ಪ್ರಕಾರ ಮೃತನು ಗುತ್ತಿಗೆ ಆಧಾರದ ಮೇಲೆ ಕೆಲಸವನ್ನು ಮುಂದುವರೆಸಲು ನಮೂದು ಇರುವುದಿಲ್ಲ ಎಂದರೆ ನಿಜ. ಮೃತನಿಗೆ ಗುತ್ತಿಗೆ ಆಧಾರದ ಮೇಲೆ ಕೆಲಸ ನೀಡಿದ್ದು ಏಜೆನ್ಸಿರವರು ಇದ್ದು, ಸದರಿ ಏಜೆನ್ಸಿರವರೇ ಸಂಬಳ ನೀಡುತ್ತಿದ್ದು, ಅವರ ಕೆಲಸದ ನೇಮಕಾತಿ ಪತ್ರ ವಗೈರೆ ಅವರಿಗೆ ಸಂಬಂಧಿಸಿದ್ದು ಇರುತ್ತದೆ. ಸದರಿ ಏಜೆನ್ಸಿಗೆ ಈ ರೀತಿ ಗುತ್ತಿಗೆ ಆಧಾರ ಮೇಲೆ ಕೆಲಸ ನೀಡುವುದಕ್ಕೆ ಕೆಐಎಡಿಬಿ ಇಲಾಖೆ ಪರವಾನಿಗೆ ನೀಡಿರುತ್ತದೆ ಎಂದರೆ ನಿಜ. ಈ ರೀತಿ ಏಜೆನ್ಸಿ ಮುಖಾಂತರ ಮಾಡಿಸುವ ಕೆಲಸದ ಪೂರ್ಣ ಅಧಿಕಾರ ಸದರಿ ಇಲಾಖೆಯವರು ಹೊಂದಿರುತ್ತಾರೆ ಎಂದರೆ ನಿಜ. ಏಜೆನ್ಸಿ

ಮುಖಾಂತರ ಮೃತನಿಗೆ ಗುತ್ತಿಗೆ ಆಧಾರದ ಮೇರಲೆ ಕೆಲಸ ನೀಡದೆ ಇದ್ದರೂ ಸಹ ಅವರ ಕೆಲಸ ಮತ್ತು ಸಂಬಳದ ಕುರಿತು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

***ಮರು ವಿಚಾರಣೆ : ಇಲ್ಲ.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,
ಧಾರವಾಡ